**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸ್ಪೆಷಲ್ ಕೇಸ್ ನಂಃ 58/2021 ಪಿ.ಡಬ್ಲ್ಯುಃ 4**

**ಸಿ.ಡಬ್ಲ್ಯುಃ 6**

| | |
|---|---|
| ಸಾಕ್ಷಿದಾರರ ಹೆಸರು | ಸಚಿನ್ |
| ತಂದೆಯ ಹೆಸರು | ಮಧು ನಾಯ್ಕ |
| ವಯಸ್ಸು | 28 ವರ್ಷ |
| ಉದ್ಯೋಗ | ಟೆಕ್ನಿಕಲ್ ಕನ್ಸಲ್ಟೆಂಟ್ (ಗುತ್ತಿಗೆ ಆಧಾರ) , ಆರ್ ಟಿ ಓ ಕಚೇರಿ, ಉಡುಪಿ |
| ವಿಳಾಸ | ಉಡುಪಿ |

ದಿನಾಂಕಃ 29-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ನಾನು 2018 ರಿಂದ ಗುತ್ತಿಗೆ ಆಧಾರದಲ್ಲಿ ಆರ್ ಟಿ ಓ ಕಚೇರಿಯಲ್ಲಿ ಟೆಕ್ನಿಕಲ್ ಕನ್ಸಲ್ಟೆಂಟ್ ಎಂದು ಕೆಲಸ ಮಾಡುತ್ತಿದ್ದೇನೆ. ನಮ್ಮ ಕಂಪೆನಿಯ ಹೆಸರು ರೋಸ್ ಮಾರ್ಟ್ ಪ್ರೈವೇಟ್ ಲಿಮಿಟೆಡ್.

2) ದಿನಾಂಕ 16-03-2019 ರಂದು ಚಾಸಾ -3 ನನಗೆ ಫೋನ್ ಮಾಡಿ ಆರ್ ಟಿ ಓ ಕಚೇರಿಗೆ ಬರಲು ಹೇಳಿದ್ದರು. ಆಗ ಸಮಯ 3-30 ಗಂಟೆ ಆಗಿತ್ತು. ಆಗ 1 ನೇ ಆರೋಪಿ ಅಲ್ಲಿ ಮೇಲಾಧಿಕಾರಿಯಾಗಿದ್ದರು. ಅಲ್ಲಿ ಚಾಸಾ -3 ಸಹ ಇದ್ದರು. ಅಲ್ಲಿ ಇದ್ದ ಚಾಸಾ -20, ಇವರು ಆದಿನ 1 ನೇ ಅರೋಪಿಯ ಕ್ಯಾಬೀನ್ ನ ಡಿವಿಆರ್ ನಲ್ಲಿಯ 2-10 ರಿಂದ 2-22 ರವರೆಗಿನ ದ್ರಶ್ಯಾವಳಿಯನ್ನು ತೋರಿಸಲು ಕೇಳಿದ್ದರು. ನಾನು ಆ ದ್ರಶ್ಯಾವಳಿಯನ್ನು ತೆಗೆದು ತೋರಿಸಿದ್ದೆ. ಆ ದ್ರಶ್ಯದಲ್ಲಿ 1 ನೇ ಆರೋಪಿ, 2 ನೇ ಆರೋಪಿಗೆ ಚೀಟಿಯೊಂದನ್ನು ಕೊಡುವುದು ಕಂಡುಬಂದಿತ್ತು. ಆ ದ್ರಶ್ಯಾವಳಿಯನ್ನು ಚಾಸಾ -20 ಇವರು ಪೆನ್ ಡ್ರೈವ್ ಗೆ ಹಾಕಿಕೊಡಲು ಹೇಳಿದ್ದರು. ಅದರಂತೆ ನಾನು ಹಾಕಿ ಕೊಟ್ಟಿದ್ದೆ. ಆ ಪೆನ್ ಡ್ರೈವ್ ನ್ನು ನೋಡಿದರೆ ಗುರುತಿಸಬಲ್ಲೆ. ಅದು ಈಗಾಗಲೇ ಎಂಒ-11 ಆಗಿದೆ.

3) ಆದಿನ ಇದ್ದ ಡಿವಿಆರ್ ನ್ನು ಮ್ಯಾನಿಟರ್ ನಿಂದ ಬೇಪರ್ಡಿಸಿ ಚಾಸಾ -20 ಇವರಿಗೆ ಕೊಟ್ಟಿದ್ದೆ. ಸದರಿ ಡಿವಿಆರ್ ಮತ್ತು ಪೆನ್ ಡ್ರೈವ್ ಗಳನ್ನು ನೋಡಿದರೆ

ಗುರುತಿಸಬಲ್ಲೆ. ಸದರಿ ಡಿವಿಆರ್ ನ್ನು ಈಗಾಗಲೇ ಎಂಒ-12 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ಆ ಡಿವಿಆರ್ ನ್ನು ನೋಡಿ ಗುರುತಿಸಿರುತ್ತಾರೆ. ಈ ವಿಷಯವಾಗಿ ನಾನು ಕೊಟ್ಟಿದ್ದ ಸಾಕ್ಷ್ಯ ಅಧಿನಿಯಮದ ಕಲಂ 65 ಬಿ ಪ್ರಮಾಣ ಪತ್ರವನ್ನು ಈಗ ನೋಡಿ ಅದನ್ನು ನಿಶಾನೆ ಪಿ-25 ಎಂದು, ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-25(ಎ) ಎಂದು ಗುರುತಿಸಿದೆ.

4) ಆದಿನ ಜಪ್ತು ಮಾಡಿದ ವಿಡಿಯೋ ಲಂಚ ಪಡೆದ ಸಂದರ್ಭದ್ದು ಎಂದು ಚಾಸಾ-20 ಹೇಳಿದ್ದರಿಂದ ಗೊತ್ತು.

5) ಈಗ ಎಂಒ-11 ರ ಪೆನ್ ಡ್ರೈವ್ ನ್ನು ನ್ಯಾಯಾಲಯದಲ್ಲಿರುವ ಯುಎಸ್‌ಬಿ ರೀಡರ್ ಮೂಲಕ ಹಾಕಿ ನೋಡಲಾಗಿ, ಸದರಿ ದಾಖಲೆ 10 ನಿಮಿಷ 23 ಸೆಕೆಂಡ್ ಇರುತ್ತದೆ. ಈಗ ಅದನ್ನು ನೋಡಿದಾಗ 1 ನೇ ಅರೋಪಿ, 2 ನೇ ಆರೋಪಿಗೆ ಚೀಟಿ ಒಂದನ್ನು ಕೊಡುವುದು ಕಂಡಿತ್ತು.

**<u>ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಬಿ.ಹೆಚ್. ವಕೀಲರಿಂದ</u>**

1) ರೋಸ್ ಮಾರ್ಟ್ ಕಂಪೆನಿಯಿಂದ ನಾವು 12 ಕ್ಯಾಮಾರಗಳನ್ನು ನೋಡಿಕೊಳ್ಳುತ್ತಿದ್ದೇವೆ. ಆದಿನ ನಾನು ಬಂದಾಗ ಎಲ್ಲಾ ಕ್ಯಾಮಾರಗಳ ದ್ರಶ್ಯಾವಳಿಯ ವೀಕ್ಷಣೆ ಮಾಡಿಲ್ಲ. ಪೆನ್ ಡ್ರೈವ್‌ಗೆ ಡಿವಿಆರ್‌ ನಿಂದ ದ್ರಶ್ಯಾವಳಿಗಳನ್ನು ಎಲ್ಲಾ ಕ್ಯಾಮಾರಗಳಿಂದ ತೆಗೆದಿಲ್ಲ. ಎಂಒ-11 ರ ಪೆನ್ ಡ್ರೈವ್ ನ್ನು ಮತ್ತು ಎಂಒ-12 ರ ಡಿವಿಆರ್ ನ್ನು ನನ್ನ ಸಮಕ್ಷಮ ಬಟ್ಟೆಯಲ್ಲಿ ಸುತ್ತಿ, ಸೀಲು ಮಾಡಿಲ್ಲ. ಪೊಲೀಸರು ಕೇಳಿದಿ ಅವಧಿಯ ದ್ರಶ್ಯಾವಳಿಯನ್ನು ಮಾತ್ರವೇ ನಾನು ಪೆನ್ ಡ್ರೈವ್ ಗೆ ಹಾಕಿಕೊಟ್ಟಿದ್ದೇನೆ.

2) ನಿಶಾನೆ ಪಿ-25 ರ ಪ್ರಮಾಣ ಪತ್ರವನ್ನು ಪೊಲೀಸರು ತಯಾರು ಮಾಡಿದ್ದರು. ನಿಪಿ-25 ರಲ್ಲಿ ಏನು ಬರೆದಿದೆ ಎಂದು ಗೊತ್ತು. ನಿಪಿ-25 ನ್ನು ಬರೆಯಲು ನಾನು ಹೇಳಿಲ್ಲ. ನಾನು ಪೊಲೀಸರ ಕೋರಿಕೆ ಮೇರೆಗೆ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನಾನು ಎಂಒ-11 ಮತ್ತು 12 ಕ್ಕೆ ಸಂಬಂಧಪಟ್ಟ ಸೂಕ್ತ ತಂತ್ರಜ್ಞನಲ್ಲ ಎಂದರೆ ಸರಿಯಲ್ಲ. ಮತ್ತು ನಿಪಿ-25 ರ ದಾಖಲೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಡಿವಿಆರ್ , ಪೆನ್ ಡ್ರೈವ್ ಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಎ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿರುತ್ತಾರೆ.**

**ನ್ಯಾಯಾಲಯದಿಂದ ಪ್ರಶ್ನೆಃ** ಬೇರೆ ಕ್ಯಾಮಾರದ ದ್ರಶ್ಯಗಳನ್ನು, ಇನ್ನೊಂದು ಕ್ಯಾಮರಾದ ಸಮಯಾವಳಿಗೆ ಸೇರಿಸಲು ಬರುತ್ತದೆಯಾ ಎಂದರೆ , ಇಲ್ಲ.

**ಮರುವಿಚಾರಣೆಃ ಇಲ್ಲ-**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ